ನಲಿ-ಕಲಿ ಬದಲು ಕಾಗುಣಿತ ಮೊದಲು ಕಲಿಸಿ

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಬೇಂದ್ರೆ ಕೃಷ್ಣಪ್ಪ ಸಲಹೆ » ಕಲಿಕಾ ಪದ್ಧತಿ ಬದಲಾವಣೆಗೆ ಆಗ್ರಹ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿರುವ ಕನ್ನಡ ಕಲಿಕಾ ಪ್ರಯೋಗವನ್ನು ಬದಲಿಸಿ, ಮೊದಲಿನಂತೆ ಅಕ್ಷರ, ಕಾಗುಣಿತ ಕಲಿಸಬೇಕು ಎಂದು ಹಿರಿಯ ಸಾಹಿತಿ ಬೇಂದ್ರೆ ಕೃಷ್ಣಪ್ಪ ಹೇಳಿದ್ದಾರೆ.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ಕಸಾಪ ಶನಿವಾರ ಮಲ್ಲೇಶ್ವರದಲ್ಲಿ ಆಯೋಜಿಸಿದ್ದ 2ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದರು.

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆಯ ವಿಧಾನ ಹಾಗೂ ಪಠ್ಯಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಪದ ಕಲಿಸಿ ಅನಂತರ ಅಕ್ಷರ ಕಲಿಸುವ ಕೃತಕ ಕಲಿಕಾ ಪದ್ಧತಿಯಿಂದ ಭಾಷೆ ಮೇಲೆ ಪರಿಣಾಮ ಬೀರುತ್ತಿದೆ. ಮಕ್ಕಳು ಒತ್ತಕ್ಷರ, ದೀರ್ಘಾಕ್ಷರಗಳ ಬಳಕೆಯಲ್ಲಿ ಎಡವುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ವ್ಯವಸ್ಥೆ ಬದಲಾಗಲಿ: ಕನ್ನಡ ಮಾಧ್ಯಮದ ಮಕ್ಕಳ ಕಲಿಕೆ ಭಾಷೆಯ ತೊಡಕಿನಲ್ಲಿ ಸಂವಹನಗೊಳ್ಳದೆ ಸೋಲುತ್ತಿದೆ. ಬಡ, ಅಸಹಾಯಕ ಮಕ್ಕಳು ಉನ್ನತ ಶಿಕ್ಷಣ ಪಡೆಯದೆ, ಉತ್ತಮ ಉದ್ಯೋಗದಿಂದ ವಂಚಿತರಾಗಿ, ಆರ್ಥಿಕವಾಗಿ ಹಿಂದುಳಿಯುವ ಪರಿಸ್ಥಿತಿಗೆ ಎದುರಾಗಿದೆ. ಪ್ರೌಢ ಶಿಕ್ಷಣ ಮುಗಿಸಿದವರೂ ಅಲ್ಪಪ್ರಾಣ, ಮಹಾಪ್ರಾಣದ ಪದಗಳನ್ನು ಬರೆಯುವಲ್ಲಿ, ಅವರನ್ನು ಉಚ್ಚರಿಸುವಲ್ಲಿ ಎಡವುತ್ತಿದ್ದಾರೆ ಎಂದರು.

> ಕನ್ನಡಪರ ಹೋರಾಟದಲ್ಲೂ ಮುಂಚೂಣಿ

ಇಂದಿನ ಪಠ್ಯಕ್ರಮದಲ್ಲಿ ಸ್ವರ ಅಕ್ಷರ, ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ ಎಂಬಿತ್ಯಾದಿ ಮೂಲ ಪಾಠವನ್ನು ಪ್ರಾಥಮಿಕ ಶಾಲಾ ಮಕ್ಕಳಿಗೆ ಹೇಳಿಕೊಡಲಾಗುತ್ತಿಲ್ಲ. ಅವರ್ಗೀಯ ವ್ಯಂಜನಗಳನ್ನು ಪ್ರತ್ಯೇಕ ಗುಂಪೆಂದು ಕ್ರಮಬದ್ಧ ಕಲಿಕೆಯ ರೀತಿ ಹೇಳಿಕೊಡುತ್ತಿಲ್ಲ. ಕನ್ನಡ ಭಾಷೆಯ ಮೂಲಬೇರನ್ನು ನಾವೇ ನಮ್ಮ ಕನ್ನಡ ಶಿಕ್ಷಣ ಕಲಿಕೆಯ ಮೂಲಕ ಕತ್ತರಿಸುತ್ತಿದ್ದೇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉಸಿರುಗಟ್ಟುವ ವಾತಾವರಣ: ನಗರದಲ್ಲಿ ಕನ್ನಡ ಭಾಷೆ ಉಸಿರುಗಟ್ಟಿದ ವಾತಾವರಣದಲ್ಲಿದೆ. ಆಂಗ್ಲ ಭಾಷಾ ಮೋಹದಿಂದ, ಇಂಗ್ಲಿಷ್ ಮಾಧ್ಯಮ ಶಾಲೆಗಳ ಹಬ್ಬಳದಲ್ಲಿ ಕನ್ನಡದ ಅಸ್ಮಿತೆಯನ್ನು ಉಳಿಸಿಕೊಳ್ಳುವುದೇ ಸವಾಲಾಗಿದೆ. ಕರ್ನಾಟಕದವರಾಗುವುದು ಬೇರೆ, ಕನ್ನಡಿಗರಾಗಿ ಬಾಳುವುದು ಬೇರೆ ಎಂದು ವಿಶ್ಲೇಷಿಸಿದರು. ರಾಜಧಾನಿಯಲ್ಲಿ ಮಲ್ಲೇಶ್ವರ ಹಲವು ವಿಶೇಷಗಳ ಬಡಾವಣೆಯಾಗಿದ್ದು, ಕನ್ನಡ ಜಾಗೃತಿ ಮೂಡಿಸುವ ಪರಿಸರ ಇಲ್ಲಿದೆ. ಜತೆಗೆ ಚಿತ್ರರಂಗ ಹಾಗೂ ಕನ್ನಡ ಪರ ಹೋರಾಟದಲ್ಲೂ ಮುಂಚೂಣಿಯಲ್ಲಿದೆ ಎಂದು ಕೃಷ್ಣಪ್ಪ ಭಾಷಣದಲ್ಲಿ ಉಲ್ಲೇಖಿಸಿದರು.

ಕಸಾಪ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಮಾಯಣ್ಣ, ಮಲ್ಲೇಶ್ವರ ಕ್ಷೇತ್ರಾಧ್ಯಕ್ಷ ಕೆ. ಗಣೇಶರಾವ್ ಕೇಸರ್ಕರ್, ಡಾ.ವೂಡೇ ಪಿ. ಕೃಷ್ಣ, ಸಾಹಿತಿ ಬೈರಮಂಗಲ ರಾಮೇಗೌಡ ಮತ್ತಿತರರಿದ್ದರು.

ಮಲ್ಲೇಶ್ವರ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ ವೇಳೆ ಬೇಂದ್ರೆ ಕೃಷ್ಣಪ್ಪ, ಎಸ್.ಜಿ.ಸಿದ್ದರಾಮಯ್ಯ, ಮಾಯಣ್ಣ, ವೂಡೇ ಪಿ. ಕೃಷ್ಣ, ಕೆ. ಗಣೇಶರಾವ್ ಕೇಸರ್ಕರ್ ಮತ್ತಿತರರು ಉಪಸ್ಥಿತರಿದ್ದರು.

> **ಭಾಷಾ ನಿಯಮ ಪಾಲನೆಯಾಗಲಿ**
>
> ರಾಜ್ಯದಲ್ಲಿರುವ ಎಲ್ಲರಿಗೂ ಕನ್ನಡ ಕಲಿಸುವುದರ ಜತೆಗೆ, ನಮ್ಮ ಮಕ್ಕಳಿಗೆ ಮೊದಲು ಕನ್ನಡ ಕಲಿಸಬೇಕಿದೆ. ಕನ್ನಡ ಭಾಷಾ ಕಲಿಕಾ ನಿಯಮದಂತೆ ಎಲ್ಲ ಆಂಗ್ಲ ಮಾಧ್ಯಮದ, ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಶಾಲೆಗಳಲ್ಲಿ 1ನೇ ತರಗತಿಯಿಂದಲೇ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಬೇಕು ಎಂದು ಕೃಷ್ಣಪ್ಪ ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣೆ

ಅರಮನೆಗೆ ಸೀಮಿತವಾಗಿದ್ದ ಸಾಹಿತ್ಯವನ್ನು ವಿಕೇಂದ್ರೀಕರಿಸಿ, ಕನ್ನಡ ಸಾಹಿತ್ಯ ಪರಿಷತ್ತು ರಚಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದು ಎಸ್.ಜಿ. ಸಿದ್ದರಾಮಯ್ಯ ಹೇಳಿದರು. ಅಕ್ಷರವಂತ ಸಮಾಜದಿಂದ ಕಡೆಗಣಿಸಲ್ಪಟ್ಟಿದ್ದ ಜನಪದ ಸಾಹಿತ್ಯಕ್ಕೂ ಮನ್ನಣೆ ನೀಡುವಂತೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತು ಇಂದು ಕೇವಲ ಬೆಂಗಳೂರು ಕೇಂದ್ರಕ್ಕೆ ಸೀಮಿತವಾಗದೇ, ಜಿಲ್ಲೆ, ತಾಲೂಕು, ಹೋಬಳಿ ಮಟ್ಟದಲ್ಲಿ ಕನ್ನಡ ಕೃಷಿಯನ್ನು ನಡೆಸುತ್ತಿದೆ. ಸಾಹಿತ್ಯ ಸಮ್ಮೇಳನಗಳ ಮೂಲಕ, ಕನ್ನಡ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ರಾಜಕೀಯ ಸೇರಿ ವಿವಿಧ ವರ್ಗದ ವಿಚಾರಗಳನ್ನು ಚರ್ಚಿಸಲಾಗುತ್ತಿದೆ. ಸಮ್ಮೇಳನಗಳು ಸಾಕ್ಷಿಪ್ರಜ್ಞೆಯ ವೇದಿಕೆಯಾಗಿ, ಜನರ ಆಶಯಗಳನ್ನು ಪೂರೈಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧಿಕಾರಿಗಳಿಂದಲೇ ಕನ್ನಡಕ್ಕೆ ಧಕ್ಕೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕನ್ನಡ ಉಳಿಸುವ ಕಾರ್ಯ ವೈಫಲ್ಯಕ್ಕೆ ರಾಜ್ಯದ ಅಧಿಕಾರಿ ವರ್ಗದ ಇಚ್ಛಾಶಕ್ತಿಯ ಕೊರತೆಯೇ ಮುಖ್ಯ ಕಾರಣ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಆರೋಪಿಸಿದ್ದಾರೆ.

> » ಪ್ರೊ. ಎಸ್.ಜಿ. ಸಿದ್ದರಾಮಯ್ಯ ಆರೋಪ

ಮಲ್ಲೇಶ್ವರದ ಸರ್ಕಾರಿ ಶಾಲಾ ಆವರಣದಲ್ಲಿ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ 2ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದರು.

ಉಂಡ ಮನೆಗೆ ದ್ರೋಹ ಬಗೆಯುವ ಅಧಿಕಾರಿಗಳು ರಾಜ್ಯದಲ್ಲಿದ್ದು, ಅವರಲ್ಲಿರುವ ಇಚ್ಛಾಶಕ್ತಿಯ ಕೊರತೆಯಿಂದ ಕನ್ನಡದ ಅಭಿವೃದ್ಧಿಗೆ ಧಕ್ಕೆ ಉಂಟಾಗುತ್ತಿದೆ ಎಂದು ಅವರು ಹೇಳಿದರು. ಭಾಷಾ ಇಚ್ಛಾ ಶಕ್ತಿಗೆ ತಮಿಳುನಾಡು ಮಾದರಿಯಾಗಿ ನಿಲ್ಲುತ್ತದೆ. ತಮಿಳುನಾಡು ಪಕ್ಷೇತರವಾಗಿ ಭಾಷಾ ಇಚ್ಛಾಶಕ್ತಿಯನ್ನು ಮೆರೆಯುತ್ತಿದೆ. ಜಾಗತಿಕ ಮಟ್ಟದಲ್ಲಿ ತಮಿಳು ತನ್ನದೇ ಆದ ಮಾನ್ಯತೆ ಪಡೆಯುತ್ತಿದೆ. 1ರಿಂದ 10ನೇ ತರಗತಿವರೆಗೆ ತಮಿಳು ಭಾಷೆ ಪ್ರಥಮ ಭಾಷೆಯಾಗಿ ಕಲಿಕೆ ಕಡ್ಡಾಯ ಎಂಬ ನಿಯಮ 10 ವರ್ಷದ ಹಿಂದೆಯೇ ಜಾರಿಗೊಳಿಸಿದ್ದಾರೆ. ಅಲ್ಲಿನ ಅಧಿಕಾರಿಗಳು ಈ ನಿಯಮ ಪಾಲನೆಯಾಗುತ್ತಿರುವ ಬಗ್ಗೆ ನಿಗಾ ವಹಿಸುತ್ತಿದ್ದಾರೆ. ತಪ್ಪಿದಲ್ಲಿ, ಆಯಾ ಶಿಕ್ಷಣ ಸಂಸ್ಥೆಗೆ ಸೂಕ್ತ ಕ್ರಮವನ್ನೂ ಜಾರಿಗೊಳಿಸುತ್ತಿದ್ದಾರೆ. ಆದರೆ ಕರ್ನಾಟಕದ ಅಧಿಕಾರಿಗಳಲ್ಲಿ ಇಂತಹ ಇಚ್ಛಾಶಕ್ತಿ ಇಲ್ಲವಾಗಿದೆ ಎಂದು ಅವರು ಆರೋಪಿಸಿದರು. ಕನ್ನಡದ ಅಧಿಕಾರಿಗಳು ಖಾಸಗಿ ಶಿಕ್ಷಣ ವಲಯದ ಕಡೆಗೆ ವಾಲುತ್ತಿದ್ದು, ಅಲ್ಲಿಯೂ ಕನ್ನಡ ಉಳಿಯದಂತೆ ಹಾಗೂ ಸರ್ಕಾರಿ ವಲಯದಲ್ಲೂ ಕನ್ನಡ ಬಾಗಿಲು ಮುಚ್ಚುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪಾರಂಪರಿಕ ಗುರುತುಗಳ ನಾಶ: ರಾಜ್ಯದ ಪಾರಂಪರಿಕ ಗುರುತುಗಳನ್ನು ನಾಶಪಡಿಸುವ ಕೆಲಸವಾಗುತ್ತಿದೆ. ಇದಕ್ಕೆ ಇತ್ತೀಚೆಗೆ ಭಾರತೀಯ ಸ್ಟೇಟ್ ಬ್ಯಾಂಕ್ ಜತೆ ವಿಲೀನಗೊಂಡ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಒಂದು ಉದಾಹರಣೆ. ರಾಷ್ಟ್ರದಲ್ಲಿ ಬಹುತ್ವದ ಪರಿಕಲ್ಪನೆ ಕಾಣೆಯಾಗಿ, ಪ್ರಭುತ್ವ ಹೆಚ್ಚು ಪ್ರಾಬಲವಾಗುತ್ತಿದೆ. ಇದು ಆತಂಕಕಾರಿ ಬೆಳವಣಿಗೆ. ಎಲ್ಲ ರಾಜ್ಯಗಳ ಅಸ್ಮಿತೆ ಉಳಿದರಷ್ಟೇ ದೇಶದ ಅಸ್ಮಿತೆ ಉಳಿಯುತ್ತದೆ ಎಂದರು.

ವೈಭವಪೂರ್ಣ ಮೆರವಣಿಗೆ

ಶನಿವಾರ ಬೆಳಗ್ಗೆ ಮಲ್ಲೇಶ್ವರ ಕುವೆಂಪು ಪ್ರತಿಮೆಯಿಂದ ಸಂಪಿಗೆ ರಸ್ತೆ ಮುಖ್ಯ ರಸ್ತೆಯ ಮೂಲಕ ಸಮ್ಮೇಳನಾಧ್ಯಕ್ಷ ಬೇಂದ್ರೆ ಕೃಷ್ಣಪ್ಪ ಅವರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಬೆಂಗಳೂರು ನಗರಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಾಯಣ್ಣ ಪರಿಷತ್ತಿನ ಧ್ವಜಾರೋಹಣ ಮಾಡಿದರು. ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ ರಾಷ್ಟ್ರಧ್ವಜ ಹಾಗೂ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ. ಗಣೇಶ್ ರಾವ್ ಕೇಸರ್ಕರ್ ನಾಡಧ್ವಜಾರೋಹಣ ನಡೆಸಿದರು. ಸಾರೋಟಿನಲ್ಲಿ ಬೇಂದ್ರೆ ಕೃಷ್ಣಪ್ಪ ದಂಪತಿಗಳನ್ನು ಕುಳ್ಳಿರಿಸಿ ವೈಭವದ ಮೆರವಣಿಗೆ ನಡೆಸಲಾಯಿತು. ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು.